# ಹೊಸತು

## ವಧು-ವರರಿಗೆ ಫ್ಯಾಬ್‌ಅಲಿ ಒಡವೆ

ಒಡವೆಗಳ ಮಾರಾಟಕ್ಕೆ ಹೆಸರಾದ ಪ್ಲಾಟಿನಮ್ ಎವಾರ ಕಂಪೆನಿ ನವ ವಧು –ವರರಿಗೆಂದು ಹೊಸ ಬಗೆಯ ಪ್ಲಾಟಿನಂ ಒಡವೆಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಈ ಸಂಗ್ರಹದಲ್ಲಿ ಕಿವಿಯೋಲೆ, ಬಳೆ, ಸರ, ಬ್ರೇಸ್ಲೆಟ್‌ಗಳಿದ್ದು, ಗ್ರಾಹಕರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ಹೇಳಿದೆ. ಬೆಲೆ 75,000 ದಿಂದ ಆರಂಭ.

www.Ptevara.in






## ಬಹುಮಾಧ್ಯಮ ಆಡಿಯೊ

ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕೆಗೆ ಹೆಸರಾದ ಕಂಪೆನಿ ಕೇನ್‌ವುಡ್ 'ಡಿಡಿಎಕ್ಸ್9016ಎಸ್' ಹೆಸರಿನ ಬಹುಮಾಧ್ಯಮ ಆಡಿಯೊ ಉಪಕರಣವನ್ನು ಪರಿಚಯಿಸಿದೆ. ಏಳು ಇಂಚಿನ ಹೈ ಡೆಫಿನಿಷನ್ ಪರದೆ ಇದ್ದು, ಇದರಲ್ಲಿ ಡಿವಿಡಿ, ಯುಎಸ್‌ಬಿ, ಕ್ಯಾಮೆರಾ, ಎಫ್‌ಎಂ ಪ್ಲೇಯರ್ ಜೊತೆಗೆ ಇತರ ಸೌಲಭ್ಯಗಳಿವೆ. ಮೊಬೈಲ್‌ನಿಂದ ಕರೆ, ಫೋಟೊ, ಸಂಗೀತ ಇತ್ಯಾದಿ ಮಾಹಿತಿಯನ್ನು ಈ ಉಪಕರಣಕ್ಕೆ ಸಂಪರ್ಕ ಕಲ್ಪಿಸಬಹುದು. ಬೆಲೆ 64,500 ರೂಪಾಯಿ.

## ಫ್ಯಾಬ್‌ಅಲಿ ಹ್ಯಾಂಡ್‌ಬ್ಯಾಗ್ಸ್

ಫ್ಯಾಷನ್ ವಸ್ತುಗಳ ಮಾರಾಟ ಕಂಪೆನಿ ಫ್ಯಾಬ್‌ಅಲಿ ಹ್ಯಾಂಡ್‌ಬ್ಯಾಗ್‌ಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ವಿಶಿಷ್ಟ ವಿನ್ಯಾಸ ಮತ್ತು ಬಣ್ಣಗಳಲ್ಲಿ ಲಭ್ಯವಿದ್ದು, ಮಹಿಳೆಯರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ವಿಶ್ವಾಸ ವ್ಯಕ್ತಪಡಿಸಿದೆ. ಬೆಲೆ 1900 ರೂಪಾಯಿ.

ಮಾಹಿತಿಗೆ: arun@actimediaindia.com






## ಮೊಟಾರ್‌ಹೆಡ್ ಕೈಗಡಿಯಾರ

ಕೈಗಡಿಯಾರ ತಯಾರಿಕೆಗೆ ಹೆಸರಾದ ಫಾಸ್ಟ್ರ್ಯಾಕ್ ಕಂಪೆನಿ 'ಫಾಸ್ಟ್ರ್ಯಾಕ್ ಮೋಟಾರ್‌ಹೆಡ್' ಹೆಸರಿನ ಕೈಗಡಿಯಾರಗಳ ಸಂಗ್ರಹವನ್ನು ಬಿಡುಗಡೆಗೊಳಿಸಿದೆ. ಈ ಕೈಗಡಿಯಾರಗಳು ವಿಶಿಷ್ಟ ವಿನ್ಯಾಸದಿಂದ ಕೂಡಿದ್ದು, ಯುವಕ–ಯುವತಿಯರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ಹೇಳಿದೆ. ಬೆಲೆ 1895 ರೂಪಾಯಿಯಿಂದ ಆರಂಭ.

ಮಾಹಿತಿಗೆ: 8296892137




## ಹೊಸ ಕೇಶ ತೈಲ

ಸೌಂದರ್ಯ ವರ್ಧಕ ಉತ್ಪನ್ನಗಳಿಗೆ ಹೆಸರಾದ ಕಂಪೆನಿ ಏವಾನ್ 'ಏವಾನ್ ನ್ಯಾಚುರಲ್ ಹೇರ್ ಆಯಿಲ್' ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಕೂದಲು ಆರೋಗ್ಯಕರವಾಗಿ ಬೆಳೆಯಲು ನೆರವಾಗುವುದಲ್ಲದೆ, ಹೊಳಪು ನೀಡುತ್ತದೆ ಎಂದು ಕಂಪೆನಿ ಹೇಳಿದೆ. ಬೆಲೆ 350 ರೂಪಾಯಿ.

www.avoncompany.com

## ಕೆನಾನ್ ಕ್ಯಾಮೆರಾ

ಕ್ಯಾಮೆರಾ ಇನ್ನಿತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಕಂಪೆನಿ ಕೆನಾನ್ 'ಕೆನಾನ್ ಇಒಎಸ್ 700ಡಿ' ಹೆಸರಿನ ಡಿಎಸ್‌ಎಲ್‌ಆರ್ ಕ್ಯಾಮೆರಾವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರಲ್ಲಿ ಸ್ವಯಂಚಾಲಿತ ವೀಡಿಯೊ ವ್ಯವಸ್ಥೆ ಇದೆ. ಉತ್ತಮ ಫೋಟೊ, ವೀಡಿಯೊ ತೆಗೆಯಬಹುದು ಎಂದು ಕಂಪೆನಿ ಹೇಳಿದೆ. ಬೆಲೆ 33,291 ರೂಪಾಯಿ. ಕೆನಾನ್ ಮಾರಾಟ ಮಳಿಗೆಗಳಲ್ಲಿ ಲಭ್ಯ.

